ದಿನಾಂಕಃ 06-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ** ಆರೋಪಿ ಪರ ವಕೀಲರಿಂದ,

1) ನಾನು ಆರೋಗ್ಯ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ದಿನಾಂಕ 27/02/2019 ರಂದು ನಿವೃತ್ತಿ ಆಗಿರುತ್ತೇನೆ. ನಾನು ಸದರಿ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಆದಾಯ ತೆರಿಗೆ ಪಾವತಿ ಮಾಡುತ್ತಿದ್ದೆ. ನಿವೃತ್ತಿ ಆದ ನಂತರ ಆದಾಯ ತೆರಿಗೆ ಪಾವತಿ ಮಾಡುತ್ತಿಲ್ಲ. ನಾನು ನಿವೃತ್ತಿ ಆದ ನಂತರ ಬಂದ ಹಣ ಮತ್ತು ನನ್ನ ಗಂಡ ತೀರಿಕೊಂಡ ನಂತರ ಬಂದ ಹಣವನ್ನು ಕೂಡಿಸಿ ಆರೋಪಿಗೆ 50 ಲಕ್ಷ ಹಣವನ್ನು ನೀಡಿರುತ್ತೇನೆ. ನಾನು ನಿವೃತ್ತಿ ಆದ ಸಮಯದಲ್ಲಿ ಇಲಾಖೆಯಿಂದ 30 ಲಕ್ಷ ಹಣ ಬಂದಿರುತ್ತದೆ. ನನ್ನ ಗಂಡ ತೀರಿಕೊಂಡಾಗ ಸುಮಾರು 6 ಲಕ್ಷ ಹಣ ಬಂದಿರುತ್ತದೆ. ಸದರಿ ಹಣವನ್ನು ಹೊರತು ಪಡಿಸಿ ಇತರೇ ಆದಾಯ ಇರಲಿಲ್ಲ.

2) ಆರೋಪಿ ನನ್ನ ಮಗನ ಸ್ನೇಹಿತ ಹಾಗೂ ಮಗನ ಮೂಲಕ ಪರಿಚಯ ಆಗಿರುತ್ತಾರೆ. ಆರೋಪಿಗೆ 50 ಲಕ್ಷ ಹಣದ ಜೊತೆಗೆ ಒಡವೆಗಳನ್ನು ಸಹ ನೀಡಿರುತ್ತೇನೆ. ಆರೋಪಿ ವ್ಯಾಪಾರ ಮಾಡಲು ನನ್ನಿಂದ ಹಣವನ್ನು ಪಡೆದುಕೊಂಡಿರುತ್ತಾರೆ. ನನ್ನ ಮತ್ತು ಆರೋಪಿ ನಡುವೆ ಸಾಲದ ವ್ಯವಹಾರ ಹೊರತುಪಡಿಸಿ ಇತರೇ ವ್ಯವಹಾರ ಇರುವುದಿಲ್ಲ. ನನ್ನ ಮಗನ ಮದುವೆ 13.06.2021 ರಂದು ಆಗಿರುತ್ತದೆ. ಆರೋಪಿ ನನ್ನ ಮಗನ ಮದುವೆಯ 2 ತಿಂಗಳ ಹಿಂದೆ ಪರಿಚಯ ಆಗಿರುತ್ತಾರೆ. ನಾನು ಆರೋಪಿಗೆ ನಗದು ರೂಪದಲ್ಲಿ 10 ಲಕ್ಷ ಮತ್ತು ಆನ ಲೈನ್ ಮೂಲಕ 40 ಲಕ್ಷ ಹಣವನ್ನು ನೀಡಿರುತ್ತೇನೆ. ನಾನು ಆರೋಪಿಗೆ ಹಣವನ್ನು ನೀಡಿದಾಗ ಆರೋಪಿ ಛಾಪಾ ಕಾಗದದ ಮೂಲಕ ದಾಖಲೆಯನ್ನು ಬರೆದುಕೊಟ್ಟಿರುತ್ತಾರೆ. ಸದರಿ ದಾಖಲೆ ನೋಟರಿ ಸಮಕ್ಷಮ ಆಗಿರುತ್ತದೆ. ಆರೋಪಿ ಹಣವನ್ನು ಮರುಪಾವತಿ ಮಾಡದೇ ಇದ್ದ ಪಕ್ಷದಲ್ಲಿ ತೋಟದ

ಜಮೀನು ಬರೆದುಕೊಡುತ್ತೇನೆ ಎಂದು ಹೇಳಿರುತ್ತಾರೆ. ಆರೋಪಿ ನನ್ನಿಂದ 50 ಲಕ್ಷ ಹಣವನ್ನು ಸ್ವೀಕರಿಸಿರುತ್ತೇನೆ ಎಂದು ಬರೆದುಕೊಟ್ಟಿರುವುದಿಲ್ಲ. ಆರೋಪಿ ಬರೆದುಕೊಟ್ಟಿರುವ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಆರೋಪಿ 10 ಲಕ್ಷ ಹಣಕ್ಕಾಗಿ ಒಂದು ಪತ್ರ ಮತ್ತು 30 ಲಕ್ಷ ಹಣಕ್ಕಾಗಿ ಒಂದು ಪತ್ರವನ್ನು ಬರೆದುಕೊಟ್ಟಿರುತ್ತಾರೆ. ನನ್ನ ಮತ್ತು ಆರೋಪಿ ನಡುವೆ ಪ್ರಸ್ತುತ ಪ್ರಕರಣ ಹೊರತುಪಡಿಸಿ ಇತರೇ ಪ್ರಕರಣ ದಾಖಲಾಗಿರುವುದಿಲ್ಲ. ನನ್ನ ಮಗ ಆರೋಪಿ ವಿರುದ್ಧ ಕಾರು ಸಂಬಂಧವಾಗಿ ಪ್ರಕರಣ ದಾಖಲು ಮಾಡಿರುತ್ತಾರೆ .

3) ನಾನು ಆರೋಪಿ ವಿರುದ್ಧ ಆರೋಪಿ ಸುಳ್ಳು ದಾಖಲಾತಿಗಳನ್ನು ಸೃಷ್ಟಿ ಮಾಡಿರುತ್ತಾರೆ ಎಂದು ಹೇಳಿ ಪ್ರಧಾನ ಸಿವಿಲ್ ನ್ಯಾಯಾಲಯದಲ್ಲಿ ಖಾಸಗಿ ಪಿರ್ಯಾದು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಪ್ರಕರಣ ಸಂಖ್ಯೆ ಪಿ ಸಿ ಆರ್ 134/2023 ಆಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಮಗ ಆರೋಪಿಯ ವಿರುದ್ಧ ಮೇಲ್ಕಂಡ ಆರೋಪಗಳನ್ನು ಮಾಡಿ ಪಿ ಸಿ ಆರ್ 135/2023 ಪ್ರಕರಣವನ್ನು ದಾಖಲು ಮಾಡಿರುತ್ತಾರೆ ಎಂದರೆ ಸರಿ. ಸದರಿ ಎರಡು ಪ್ರಕರಣಗಳಲ್ಲಿ ಪೋಲಿಸ್ ಅಧಿಕಾರಿಗಳು ಬಿ ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ಈ ಹಂತದಲ್ಲಿ ಪಿ ಸಿ ಆರ್ 134/2023 ರ ಆದೇಶ ಪುಟ ಮತ್ತು ಖಾಸಗಿ ಪಿರ್ಯಾದಿನ ದೃಡೀಕೃತ ಪ್ರತಿಯನ್ನು ಒಪ್ಪಿಕೊಂಡ ಕಾರಣ ನಿಶಾನೆ.ಡಿ-01 ಮತ್ತು 2 ಎಂದು ಗುರುತಿಸಲಾಯಿತು.

4) ನಾನು ಎಸ್ ಬಿ ಐ ಬ್ಯಾಂಕಿನಲ್ಲಿ ಖಾತೆಯನ್ನು ಹೊಂದಿರುತ್ತೇನೆ. ಇತರೇ ಬ್ಯಾಂಕಿನಲ್ಲಿ ಖಾತೆಯನ್ನು ಹೊಂದಿರುವುದಿಲ್ಲ. ನಾನು ನವನಗರ ಅರ್ಬನ ಬ್ಯಾಂಕ್ ಖಾತೆಯ ಮೂಲಕ ಆರೋಪಿಗೆ ಹಣವನ್ನು ವರ್ಗಾವಣೆ ಮಾಡಿರುತ್ತೇನೆ. ಆರೋಪಿಯ ಹೆಂಡತಿ ಮತ್ತು ಹೆಂಡತಿಯ ತಂದೆಯ ನಡುವೆ ನನಗೆ ಯಾವುದೇ ವ್ಯವಹಾರ

ಆಗಿರುವುದಿಲ್ಲ. ಅದೇ ರೀತಿ ನನ್ನ ಮತ್ತು ಆರೋಪಿ ಹೆಂಡತಿ ಮತ್ತು ಹೆಂಡತಿಯ ತಂದೆ ನಡುವೆ ಹಣಕಾಸಿನ ವರ್ಗಾವಣೆ ಆಗಿರುವುದಿಲ್ಲ. ಆರೋಪಿಯ ಮಾವನ ಮುಳ್ಳಪ್ಪ ರವರ ಖಾತೆ ಮೂಲಕ ನನ್ನ ಎಸ್ ಬಿ ಎಂ ಖಾತೆಗೆ ದಿನಾಂಕ 20.09.2021 ರಂದು ರೂ. 2,99,900/- ವರ್ಗಾವಣೆ ಆಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಮಗ ಮತ್ತು ಆರೋಪಿಯ ಮಾವ ಮುಳ್ಳಪ್ಪ ರವರ ನಡುವೆ ಯಾವುದೇ ಹಣಕಾಸಿನ ವ್ಯವಹಾರ ಆಗಿರುವುದಿಲ್ಲ. ಆರೋಪಿಯ ಮಾಣ ಮುಳ್ಳಪ್ಪ ರವರ ಖಾತೆಯಿಂದ ನನ್ನ ಮಗನ ಖಾತೆಗೆ ದಿನಾಂಕ 20.09.2021 ರಂದು ರೂ. 1,80,000/- ಹಣ ವರ್ಗಾವಣೆ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

**ಪಾಟೀ ಸವಾಲುಃ** ಆರೋಪಿ ಪರ ವಕೀಲರು ಪಾಟೀ ಸವಾಲು ವಿಚಾರಣೆಗೆ ಕಾಲಾವಕಾಶ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ